Irrigation facilities to the ryots in Afzalpur Taluk

868 SRI M. Y. PATIL (Afzalpur).—Will the Minister for Transport & Minor Irrigation be pleased to state :—

(a) the reason for non-supply of water to the farmers though the Bhiramadagi tank in Afzalpur Taluk is full of water ;

(b) whether the Government would supply its water to the ryots in order to increase the country's wealth ?

SRI M.M.J. SADYOJATHA (Minister for Transport and Minor Irrigation).—

(a) Water could not be supplied to the farmers due to non-completion of irrigation canal and buildings therein.

(b) Water will be supplied to Rabi Crops during 1982-83 by completing the works of irrigation canal and its buildings as early as possible.

ಶ್ರೀ ಎಂ ವೈ. ಪಾಟೀಲ್.—ಅಫಜಲಪುರ ತಾಲ್ಲೂಕಿನ ಭೈರಾಮಡಗಿ ಕೆರೆ ನಿರ್ಮಾಣ ಕಾರ್ಯ ಮುಗಿದಿದ್ದರೂ ರೈತರಿಗೆ ಇನ್ನೂ ನೀರು ಕೊಟ್ಟಿಲ್ಲ. ಈ ಕೆರೆ ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭವಾಯಿತು ? ಯಾವ ತಾರೀಖಿಗೆ ಕೆಲಸ ಮುಗಿದಿದೆ ? ಯಾವ ಯಾವ ರೈತರಿಗೆ ನೀರು ಕೊಡುತ್ತೀರಿ ಎಂಬುದನ್ನು ಹೇಳಬೇಕಂ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಕೆರೆ ಕಾರ್ಯ ಮುಗಿದಿದೆ. ಆದರೆ ಕಾಲುವೆ ತೆಗೆಯುವುದರಲ್ಲಿ ವಿಳಂಬವಾಗಿದೆ. ಲ್ಯಾಂಡ್ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಆಗಿಲ್ಲ. ಭೂ ಮಾಲೀಕರು ಆದಕ್ಕೆ ಅಡ್ಡಿ ಮಾಡಿದರು. ಆದ್ದರಿಂದ ತಡವಾಗಿದೆ. ಅಕ್ಟೋಬರ್ ೧೯೮೨ರಲ್ಲಿ ನೀರು ಕೊಡುತ್ತೇವೆ.

ಅಧ್ಯಕ್ಷರು.—ಹಿಂಗಾರು ಬೆಳೆಗೆ ನೀರನ್ನು ಒದಗಿಸಲಾಗುವುದು ಎಂದಿರೆಯಲ್ಲ.

ಶ್ರೀ ಎಂ. ವೈ. ಪಾಟೀಲ್.—ಒಂದೊಂದು ಸಣ್ಣ ಕೆರೆಗೆ ೧೦ ವರ್ಷ ತೆಗೆದುಕೊಳ್ಳುತ್ತಿದ್ದಾರೆ ೧೯೭೨ರಲ್ಲಿ ಪ್ರಾರಂಭವಾದ ಕೆರೆ ೧೯೮೨ ಆದರೂ ಮುಗಿದಿಲ್ಲ. ಒಂದೊಂದು ಸ್ಕೀಮಿಗೆ ೧೦-೨೦ ವರ್ಷ ಗಳಾದರೆ ಹೇಗೆ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಭೂ ಮಾಲೀಕರಿಗೆ ಭೂಮಿ ಬಿಟ್ಟುಕೊಡುವಂತೆ ಹೇಳಿದರೆ ಒಂದು ವರ್ಷದಲ್ಲೇ ಮುಗಿಸುತ್ತೇವೆ.

Water Supply Scheme in Alnawar Town, Dharwar District

873 SRI R. C. BALEKUNDARGI (Bailhongal).—Will the Minister for Housing and Urban Development be pleased to state :—

(a) the year in which the Drinking Water Scheme was commenced at Alnawar town of Dharwar District ;

(b) whether the supply of water to the citizens is pure or raw-water ; as per the above Scheme ;

(c) whether any amount has been remitted by the Town Municipality for purification of water ;

(d) if so, the quantum of amount and the year in which it has been remitted ?

SRI DHARAM SINGH (Minister for Housing and Urban Development).

(a) In the year 1972.

(b) Self purified water was being supplied through perforated water pipes since 16-2-1974 and subsequently impure water is being supplied as the perforated pipes are filled with sand. Therefore, there is necessity of purification machine.

(c) Not remitted.

(d) Does not arise.

ಶ್ರೀ ಆರ್. ಎಸ್. ಬಾಳೇಕುಂದರಗಿ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಶುದ್ಧವಾದ ಕುಡಿಯುವ ನೀರನ್ನು ಒದಗಿಸುತ್ತಿಲ್ಲ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಸುಮಾರು ೧೨ ವರ್ಷದಿಂದ ಅಶುದ್ಧವಾದ ನೀರನ್ನು ಆ ಜನರು ಕುಡಿಯುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ದವರು ಏನು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಧರ್ಮಸಿಂಗ್.—ಶುದ್ಧವಾದ ನೀರನ್ನು ಕೊಡುತ್ತೇವೆಂದು ನಾವು ಹೇಳಿಲ್ಲ. ಫಿಲ್ಟರ್ ವಾಟರ್ ಕೊಡಿ ಎಂದು ತಾವು ಕೇಳಿದ್ದೀರಿ ಆಲ್ಲಿರತಕ್ಕ ಭಾವಿಯಿಂದ ನೀರನ್ನು ನಾವು ಕೊಡುತ್ತಿದ್ದೇವೆ. ಅಲ್ಲಿ ಮತ್ತೊಂದು ಸ್ಕೀಂನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ.

ಶ್ರೀ ಆರ್. ಎಸ್. ಬಾಳೇಕುಂದರಗಿ.—೨೦ ಅಂಶದ ಕಾರ್ಯಕ್ರಮವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಧರ್ಮಸಿಂಗ್.—ಆಳ್ನಾವರ ಮುನಿಸಿಪಾಲಿಟಿ ಅಧ್ಯಕ್ಷರು ಬಂದಿದ್ದರು ಮತ್ತು ಸಂಬಂಧಪಟ್ಟ ಶಾಸಕರೂ ಬಂದಿದ್ದರು. ಈಗ ೨೦ ಅಂಶದ ಇಂಪ್ರೂವ್‌ಮೆಂಟ್ ಸ್ಕೀಂನ್ನು ಮಾಡುತ್ತಿದ್ದೇವೆ. ಇದಕ್ಕೆ ನಗರಸಭೆಯವರು ಒಂದು ರೆಸಲ್ಯೂಷನ್ ಮಾಡಿ ಕಳುಹಿಸಿಕೊಡಬೇಕೆಂದು ಕೇಳಿದ್ದೇವೆ. ಅದು ಬಂದಕೂಡಲೇ ಕ್ರಮ ಕೈಗೊಳ್ಳುತ್ತೇವೆ. ಮತ್ತು ಈ ಮಧ್ಯೆ ಸುಮಾರು ೨ ಲಕ್ಷ ರೂ. ಖರ್ಚು ಮಾಡಿ ಕೆಲಸ ಮಾಡಿದ್ದೇವೆ.

ಶ್ರೀ ಆರ್. ಎಸ್. ಬಾಳೇಕುಂದರಗಿ.—ರೆಸಲ್ಯೂಷನ್ ಬಂದಿಲ್ಲವೆಂದು ತಾವು ಹೇಳುತ್ತಿದ್ದೀರಿ. ಅಲ್ಲಿರತಕ್ಕ ಅಧ್ಯಕ್ಷರು ನನ್ನ ಸ್ನೇಹಿತರು. ಅವರು ರೆಸಲ್ಯೂಷನ್ನನ್ನು ಮಾಡಿ ಮಾನ್ಯ ರೆವಿನ್ಯೂ ಸಚಿವರಿಗೆ ಕಳುಹಿಸಿಕೊಟ್ಟಿದ್ದಾರೆ ಮತ್ತು ಅದರ ಒಂದು ನಕಲನ್ನು ನನಗೂ ಕೂಡ ಕಳುಹಿಸಿಕೊಟ್ಟಿದ್ದಾರೆ. ಆದ್ದರಿಂದ ಇದರ ಬಗ್ಗೆ ತೀವ್ರವಾದ ಕ್ರಮವನ್ನು ತೆಗೆದುಕೊಂಡು ಆಳ್ನಾವರದಿಂದ ಶುದ್ಧವಾದ ನೀರನ್ನು ಒದಗಿಸಿಕೊಡುತ್ತೀರಾ ?

ಶ್ರೀ ಧರ್ಮಸಿಂಗ್.—ಅದನ್ನು ಮಾಡುತ್ತಿದ್ದೇವೆ. ರೆಸಲ್ಯೂಷನ್ ಬರಬೇಕು. ಮತ್ತು ೧೦ ಪರ್ಸೆಂಟ್ ಹಣವನ್ನು ಅವರು ಪಂಚಿಗೆ ಕೊಡಬೇಕು. ಆದರೆ ಅವರು ೧೨ ಪರ್ಸೆಂಟ್ ಹಣವನ್ನು ಕೊಡುವ ಸ್ಥಿತಿಯಲ್ಲಿಲ್ಲವೆಂದು ತಾವು ಹೇಳುತ್ತಿದ್ದೀರಿ. ಅವರು ಕೊಡದಿದ್ದರೂ ಡೆವಲಪ್‌ಮೆಂಟ್ ಗ್ರ್ಯಾಂಟ್‌ನಲ್ಲಿ ಅಡ್ಜಸ್ಟ್‌ಮಾಡಿ ಈ ಕೆಲಸವನ್ನು ಮಾಡಿಕೊಡುವಂತೆ ಹೇಳುತ್ತೇನೆ. ಒಂದುವೇಳೆ ಅವರ ರೆಸಲ್ಯೂಷನ್ ಬಂದಿದ್ದರೆ ನಾನು ತಕ್ಷಣ ಮಂಜೂರು ಮಾಡಿಕೊಡುತ್ತೇನೆ. ಈಗಾಗಲೇ ಸುಮಾರು ೨೦ ಲಕ್ಷ ರೂ.ಗಳಷ್ಟು ಡೆವಲಪ್‌ಮೆಂಟ್ ಗ್ರ್ಯಾಂಟನ್ನು ರಿಲೀಸ್ ಮಾಡಿದ್ದೇವೆ.

ಶ್ರೀ ಆರ್. ಎಸ್. ಬಾಳೇಕುಂದರಗಿ.—ತಾವೇ ಡೆವಲಪ್‌ಮೆಂಟ್ ಗ್ರ್ಯಾಂಟನ್ನು ಕೊಡಿಸಿ ಈ ಕೆಲಸವನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಮಾಡಿಸಿಕೊಡುತ್ತೇವೆ.